## ಹೆಸರು ಬದಲಿಸುತ್ತೇನೆ



ರವಿ ಆಗತಾನೇ ಪಿಯುಸಿ ಪರೀಕ್ಷೆ ಪಾಸಾಗಿದ್ದ. ಮುಂದೇನು ಓದಬೇಕು ಎಂಬುದರ ಬಗ್ಗೆ ರವಿಯ ಮನೆಯಲ್ಲಿ ಭಾರೀ ಚರ್ಚೆ ಆರಂಭವಾಗಿತ್ತು. ಆತನ ತಾತ ಕನ್ನಡಕ ಸರಿಪಡಿಸುತ್ತಾ ಹೇಳಿದರು– 'ನೋಡಪ್ಪಾ, ನಾನು ರಂಗನಾಥ... ಎಂಜಿನಿಯರಿಂಗ್‌ನಲ್ಲಿ ಯೂನಿವರ್ಸಿಟಿಗೇ ಚಿನ್ನದ ಪದಕ ಪಡೆದು ಪಾಸಾಗಿದ್ದೆ. ಇನ್ನು ನಿನ್ನ ತಂದೆ ರಾಮನಾಥ... ಎಂಬಿಬಿಎಸ್‌ನಲ್ಲಿ ಪ್ರಥಮ ರ‍್ಯಾಂಕ್ ಪಡೆದು ಪಾಸಾಗಿದ್ದವ. ಈಗ ನೀನು ಹೇಳು, ರವೀಂದ್ರನಾಥ... ನಿನ್ನ ಮುಂದಿನ ಗುರಿ ಏನು?' 'ಏನಿಲ್ಲ...' ಆತ ತೊದಲುತ್ತಾ ಹೇಳಿದ 'ಮೊದಲು ನನ್ನ ಹೆಸರು ಬದಲಿಸಬೇಕೂಂತ ಇದ್ದೀನಿ!'

**ಕೃಷ್ಣಮೂರ್ತಿ ಭಟ್, ಬೆಳ್ಮಣ್ಣು**

## ಪ್ಯಾಂಟ್ ಚಡ್ಡಿ ಆಯ್ತು!

ಗುಂಡನಿಗೆ ಹುಟ್ಟುಹಬ್ಬಕ್ಕೆಂದು ಅವರಪ್ಪ ಹೊಸಾ ಪ್ಯಾಂಟ್ ಶರ್ಟ್ ಕೊಡಿಸಿದ್ದರು. ಆದರೆ ಪ್ಯಾಂಟ್ ಬಹಳ ಉದ್ದ ಇತ್ತು. ಅಜ್ಜಿಯ ಹತ್ತಿರ ಹೋಗಿ 'ಅಜ್ಜಿ ಪ್ಯಾಂಟ್ ಉದ್ದ ಇದೆ. ಎರಡು ಇಂಚಿನಷ್ಟು ಕತ್ತರಿಸಿ ಹೊಲಿದುಕೊಡು' ಎಂದು ಕೇಳಿದ. 'ಅಯ್ಯೋ ನನ್ನ ಸೀರೆನೇ ಹೊಲ್ಕಳಕ್ಕಾಗಿಲ್ಲ, ಇನ್ನು ನಿನ್ನ ಪ್ಯಾಂಟ್ ಎಲ್ಲಿ ಹೊಲೀಲಿ? ಆಗಲ್ಲ ನಡಿ' ಅಂದಿತು ಅಜ್ಜಿ. ಅಮ್ಮನ ಬಳಿ ಬಂದ ಗುಂಡ, 'ಈ ಪ್ಯಾಂಟ್ ಉದ್ದ ಇದೆ. ಸ್ವಲ್ಪ ಕಟ್ ಮಾಡಿ ಹೊಲಿದುಕೊಡಮ್ಮ' ಎಂದ. 'ಈಗ ಆಗಲ್ಲ. ನಿನ್ನ ಅಕ್ಕನ್ನ ಕೇಳು' ಅಂದಳು ಅಮ್ಮ. 'ಅಕ್ಕಾ, ಈ ಪ್ಯಾಂಟ್ ಸ್ವಲ್ಪ ಕಟ್ ಮಾಡಿ ಹೊಲ್ಕೊಡೇ' ಅಂತ ಕೇಳಿದ. 'ನಂಗೆ ಓದ್ಕಳಕ್ಕೇ ಟೈಮಿಲ್ಲಾ, ಪ್ಯಾಂಟ್ ಹೊಲ್ಕೊಡ್ಬೇಕಂತೆ' ಎಂದು ರೇಗಿದಳು. ಬೇಜಾರು ಮಾಡ್ಕೊಂಡ ಗುಂಡ, ಹಳೆಯ ಪ್ಯಾಂಟ್‌ಗೆ ಹೊಸಾ ಅಂಗಿ ಹಾಕ್ಕೊಂಡು ಸ್ಕೂಲಿಗೆ ಹೋದ. ಸಂಜೆ ಬಂದವನೇ ತಾನೇ ಪ್ಯಾಂಟ್ ಕಟ್ ಮಾಡಿ ಹೊಲಿಗೆ ಹಾಕಿದ. ಬೀದಿಯ ಹುಡುಗರಿಗೆ ತೋರಿಸಲು ಪ್ಯಾಂಟ್ ಹಾಕಿಕೊಂಡ. ಅದು ಮಂಡಿಯವರೆಗೆ ಮಾತ್ರ ಇತ್ತು! ಕಾರಣ ಇಷ್ಟೇ: ಪಾಪ ಹುಟ್ಟಿದ ಹಬ್ಬದ ದಿನ ಬೇಜಾರು ಮಾಡ್ಕೊಂಡು ಸ್ಕೂಲಿಗೆ ಹೋಯ್ತಲ್ಲಾ ಹುಡುಗ ಅಂದ್ಕೊಂಡು, ಅಜ್ಜಿ, ಅಮ್ಮ, ಅಕ್ಕ ಎಲ್ಲರೂ ಎರಡೆರಡು ಇಂಚು ಕತ್ತರಿಸಿ ಹೊಲಿದುಬಿಟ್ಟಿದ್ದರು!



**ಬಿ.ಎಸ್. ರಾಜಲಕ್ಷ್ಮಿ**